INSTAKAS

# ಕರ್ನಾಟಕದ ಕಿರು ಬಂದರುಗಳಲ್ಲಿ ಕಬ್ಬಿಣದ ಅದಿರು ನಿರ್ವಹಣಾ ನೀತಿ, 2025

## ಇದೀಗ ಸುದ್ದಿಯಲ್ಲಿದೆ:

**ಕರ್ನಾಟಕದ ಕಿರು (ಪ್ರಮುಖವಲ್ಲದ) ಬಂದರುಗಳಿಂದ ಕಬ್ಬಿಣದ ಅದಿರನ್ನು ರಫ್ತು ಮಾಡಲು ರಾಜ್ಯ ಸರ್ಕಾರವು ನೂತನ ನೀತಿಯನ್ನು ಅನುಮೋದಿಸಿದೆ.**

## ಹಿನ್ನೆಲೆ

**ರಫ್ತನ್ನು ನಿಷೇಧಿಸಿತ್ತು:-** ಕಬ್ಬಿಣದ ಅದಿರು ಹೊರತೆಗೆಯುವಿಕೆಯಲ್ಲಿನ ನಿಯಮಗಳ ವ್ಯಾಪಕ ಉಲ್ಲಂಘನೆ ಮತ್ತು ಭಾರಿ ಪ್ರಮಾಣದ ಕಬ್ಬಿಣದ ಅದಿರಿನ ಅಕ್ರಮ ರಫ್ತಿನ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು 2010ರಲ್ಲಿ **‘ಕರ್ನಾಟಕ ಬಂದರುಗಳ (ಬಂದಿಳಿಯುವಿಕೆ ಮತ್ತು ಸಾಗಾಣಿಕೆ / ಲ್ಯಾಂಡಿಂಗ್ ಮತ್ತು ಶಿಪ್ಪಿಂಗ್ ಶುಲ್ಕಗಳು) ಕಾಯ್ದೆ, 1961’** ರ ಅಡಿಯಲ್ಲಿ 10 ಕಿರು ಬಂದರುಗಳಿಂದ ಕಬ್ಬಿಣದ ಅದಿರು ರಫ್ತನ್ನು ನಿಷೇಧಿಸಿತ್ತು.

ಆದಾಗ್ಯೂ, 2022ರಲ್ಲಿ **ಸರ್ವೋಚ್ಚ ನ್ಯಾಯಾಲಯವು ಭಾರತ ಸರ್ಕಾರದ ನೀತಿಗಳ ಅಡಿಯಲ್ಲಿ** ಕಟ್ಟುನಿಟ್ಟಾಗಿ ಈ ಬಂದರುಗಳಿಂದ ಕಬ್ಬಿಣದ ಅದಿರನ್ನು ರಫ್ತು ಮಾಡಲು ಅನುಮತಿ ನೀಡಿತು.

ದೇಶದ ಉಳಿದ ಭಾಗಗಳಲ್ಲಿ ಇರುವಂತೆಯೇ **ಕರ್ನಾಟಕದ ಬಂದರುಗಳ ಮೂಲಕವೂ ಕಬ್ಬಿಣದ ಅದಿರು ರಫ್ತು** ಮಾಡಲು ಸರ್ವೋಚ್ಚ ನ್ಯಾಯಾಲಯ ಅನುಮತಿಸಿದೆ.

INSTAKAS

## 2025 ರ ನೂತನ ನೀತಿಯ ಬಗ್ಗೆ

- ಕರ್ನಾಟಕದ **ಕಿರು ಬಂದರುಗಳಿಂದ ಕಬ್ಬಿಣದ ಅದಿರು ರಫ್ತಿಗೆ** ದಾರಿಯನ್ನು ಸುಗಮಗೊಳಿಸಲು ರಾಜ್ಯ ಸರ್ಕಾರವು ‘ಕರ್ನಾಟಕದ ಕಿರು ಬಂದರುಗಳಲ್ಲಿ ಕಬ್ಬಿಣದ ಅದಿರು ನಿರ್ವಹಣಾ ನೀತಿ, 2025’ ಕ್ಕೆ ಅನುಮೋದನೆ ನೀಡಿದೆ.
- **ಉದ್ದೇಶ:- ಕರ್ನಾಟಕ ಸಮುದ್ರ ಸಾರಿಗೆ ಮಂಡಳಿಯ** ಅಡಿಯಲ್ಲಿ ಬರುವ ಕಿರು (ಪ್ರಮುಖವಲ್ಲದ) ಬಂದರುಗಳ ಮೂಲಕ ಕಬ್ಬಿಣದ ಅದಿರನ್ನು ನಿರ್ವಹಿಸುವುದು ಈ ನೀತಿಯ ಮುಖ್ಯ ಉದ್ದೇಶವಾಗಿದೆ.
- ಈ ನೀತಿಯು ಈ ಬಂದರುಗಳಿಂದ ಕಬ್ಬಿಣದ ಅದಿರು ರಫ್ತು ಮಾಡಲು ಅನುಸರಿಸಬೇಕಾದ ಒಂದು **ಪ್ರಮಾಣಿತ ಕಾರ್ಯಾಚರಣಾ ವಿಧಾನವಾಗಿದೆ (SOP).**

